SL. No. : EE

ಒಟ್ಟು ಪ್ರಶ್ನೆಗಳ ಸಂಖ್ಯೆ : 45]
Total No. of Questions : 45]

CCE RF
REVISED

[ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[Total No. of Printed Pages : 8

ಸಂಕೇತ ಸಂಖ್ಯೆ : 33-K **Code No. : 33-K**

ವಿಷಯ : ದ್ವಿತೀಯ ಭಾಷೆ — ಕನ್ನಡ

Subject : Second Language — KANNADA

(ಹೊಸ ಪಠ್ಯಕ್ರಮ / New Syllabus)

(ಶಾಲಾ ಅಭ್ಯರ್ಥಿ / Regular Fresh)

ದಿನಾಂಕ : 28. 03. 2018] [Date : 28. 03. 2018

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-00 ರವರೆಗೆ] [Time : 9-30 A.M. to 12-00 Noon

ಗರಿಷ್ಠ ಅಂಕಗಳು : 80] [Max. Marks : 80

ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು 45 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

ಇಲ್ಲಿಂದ ಕತ್ತರಿಸಿ

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here

ವಿಭಾಗ – 'ಎ'

ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ)

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ : 8 × 1 = 8

1. ಇಂದ್ರನು ತನಗಾದ ಸಂತೋಷವನ್ನು ಯಾವ ರೀತಿಯಲ್ಲಿ ಪ್ರಕಟಿಸಿದನು ?
2. ಅಸಿ–ಮಸಿ ಎಂಬುದರ ಅರ್ಥವನ್ನು ತಿಳಿಸಿ.
3. ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು ?
4. ಹಕ್ಕಿಗಳ ಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ ?
5. ಗುರುಗಳು ಹೇಳಿದಂತೆ ಕಾಫೀ ಮತ್ತು ಕಪ್ಪು ಯಾವುದರ ಪ್ರತೀಕಗಳು ?
6. ಏಣಿಯನ್ನು ಬಳಸಿ ಮೇಲೇರಿದವರಿಗೆ ಏಣಿ ಹಾಕುವ ಸವಾಲು ಯಾವುದು ?
7. ಅಡಿಗರು ಹಗಲಿರುಳು ಯಾವುದಕ್ಕೆ ಹೋರಾಡಬೇಕೆಂದು ಹೇಳಿದ್ದಾರೆ ?
8. ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು ?

ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 11 × 2 = 22

9. ಗಿಳಿಯು ಇಂದ್ರನನ್ನು ಯಾವ ವರ ಕೇಳಿತು ?
10. ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು ?
11. ಭಗವಂತ ಕೊಟ್ಟ ಈ ಬದುಕನ್ನು ಯಾವ ರೀತಿ ನಡೆಸಬೇಕೆಂದು ಗುರುಗಳು ಹೇಳಿದರು ?
12. ಲಂಡನ್ ಟವರ್ ಬ್ರಿಜ್‌ನ ವೈಶಿಷ್ಟ್ಯವೇನು ?
13. ಥೇಮ್ಸ್ ನದಿಯ ಮೇಲಿರುವ ಪ್ರಸಿದ್ಧ ಸೇತುವೆಗಳಾವುವು ?
14. ಏಣಿ ತಾನು ಎಂಥವರಿಗೆ ಯಾವ ರೀತಿ ಸ್ಪಂದಿಸುತ್ತೇನೆಂದು ಹೇಳುತ್ತದೆ ?
15. ಸದ್ದು ಮಾಡದೆ ಬಾಳಬೇಕು ಎಂಬುದಕ್ಕೆ ಕವಿ ಸಿ.ಪಿ.ಕೆ. ಅವರು ನೀಡುವ ಹೋಲಿಕೆಗಳಾವುವು ?
16. ಕುಣಿಗಲ್ ಕೆರೆಯ ವೈಭವ ಎಂಥವರನ್ನೂ ಬೆರಗುಗೊಳಿಸುವಂತಿತ್ತು ಏಕೆ ?
17. ಬಸವಣ್ಣನವರು ಜನರ ಮೌಢ್ಯತೆಯನ್ನು ಯಾವ ರೀತಿ ಖಂಡಿಸಿದ್ದಾರೆ ?
18. ವೈದ್ಯರ ಯಾವ ಮಾತುಗಳು ಭೀಮನಾಯಕನ ಮನಸ್ಸನ್ನು ಚುಚ್ಚಿದವು ?
19. ಕವಯಿತ್ರಿಯು ತಿಳಿಸುವಂತೆ ಹೊಳೆಯ ದಂಡೆಯ ಸಾಲಿನಲ್ಲಿ ಯಾವ ನೆನಪುಗಳಿವೆ ?

20. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** 1 × 3 = 3

ಏಕಾಂಗಿ ವೀರನಂತೆ ....

....

....

.... ಇಲ್ಲದಂತೆ ಕತ್ತಲಲ್ಲಿ ನಡೆದನು.

ಅಥವಾ

ಕಾಡು ಕಾಡು ಅಲೆದ ....

....

....

.... ಮಹಾಬೆಳಕೊಂದು ಕಂಡಿತು.

ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2 × 3 = 6

21. ರಮೇಶಗೌಡ ಎಂ.ಕೆ.

22. ಗೋಪಾಲಕೃಷ್ಣ ಅಡಿಗ ಎಂ.

ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ : 2 × 3 = 6

23. "ರೈತರು ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಿದ್ದಾರೆ"

24. "ನೆಲದಮ್ಮ ನವವಧುವೆ ಆದಳಿಂತು!"

ಈ ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8

25. ಗೋಪಾಲನು ತನ್ನ ತಾಯಿಯೊಂದಿಗೆ ನಡೆಸಿದ ಸಂಭಾಷಣೆಯ ಸಾರವನ್ನು ಅರ್ಥಪೂರ್ಣವಾಗಿ ಬರೆಯಿರಿ.

ಅಥವಾ

'ನನ್ನ ಗೋಪಾಲ' ನಾಟಕದಲ್ಲಿ ಬರುವ ಪ್ರಕೃತಿಯ ವರ್ಣನೆಯನ್ನು ಸ್ವಾರಸ್ಯಪೂರ್ಣವಾಗಿ ಬರೆಯಿರಿ.

26. ಅರ್ಜುನ ಮತ್ತು ಉತ್ತರ ಕುಮಾರ ಇವರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವರ್ಣನಾತ್ಮಕವಾಗಿ ಬರೆಯಿರಿ.

ಅಥವಾ

ಅರ್ಜುನ ಮತ್ತು ಉತ್ತರ ಕುಮಾರನ ಗುಣಸ್ವಭಾವಗಳಲ್ಲಿರುವ ವ್ಯತ್ಯಾಸವನ್ನು ನೀವು ಮೆಚ್ಚುವ ಅಂಶಗಳೊಂದಿಗೆ ವಿವರಿಸಿ.

ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : $4 \times 1 = 4$

ದಯೆ, ಕರುಣೆ, ಪರೋಪಕಾರ ಇವು ಮನುಷ್ಯನ ಸ್ವಭಾವದಲ್ಲಿ ಅಡಕವಾಗಿರುತ್ತವೆ. ಕೆಲವೊಂದು ಕಾಲ ಈ ಗುಣಗಳು ಬಲಹೀನವಾಗಬಹುದು; ಉಳಿದ ಗುಣಗಳ ಪ್ರಭಾವದಿಂದ ಕುಗ್ಗಿರಬಹುದು. ಮನುಷ್ಯನ ಮನಸ್ಸಿನಲ್ಲಿ ಒಳಿತು ಕೆಡಕುಗಳ ಮೇಲಾಟ ನಿರಂತರ ಸಾಗುತ್ತಲೇ ಇರುತ್ತದೆ. ಆದರೆ ಸದ್ಗುಣ, ಪ್ರೇಮ, ನೀತಿಯ ಬಗ್ಗೆ ಗೌರವ – ಇವು ಮನುಷ್ಯನ ಅಂತರಾಳದಲ್ಲಿ ಇದ್ದೇ ಇರುತ್ತವೆ. ಯಾವ ಮನುಷ್ಯನೂ ಮೂಲತಃ ದುರ್ಗುಣಿ ಅಥವಾ ಕಠೋರನಾಗಿರಲಾರ. ರವೀಂದ್ರನಾಥ ಠಾಕೂರರು ಒಂದೆಡೆ ಹೇಳುತ್ತಾರೆ. "ವ್ಯಕ್ತಿಗಳು ಕ್ರೂರರಾಗಿರಬಹುದು; ಆದರೆ ಮಾನವ ಮಾತ್ರ ಕರುಣಾಮಯಿ" ಎಂದು. ಸುಪ್ತಸದ್ಗುಣ ಹಾಗೂ ಸದ್ಗುಣ ಪ್ರೇಮ ಇವುಗಳನ್ನು ಚೇತರಿಸಲು ಸದಾ ಯತ್ನಿಸಬೇಕು. ಒಂದು ಕಾಲದಲ್ಲಿ ಸದ್ಗುಣಿಗೆ ಗೌರವ ಸಲ್ಲುತ್ತಿತ್ತು. ಮತ್ತೊಂದು ಕಾಲದಲ್ಲಿ ಶ್ರೀಮಂತನಿಗೆ ಗೌರವ ಸಲ್ಲುತ್ತಿತ್ತು. ಈಗಿನ ಕಾಲದಲ್ಲಿ ಮನುಷ್ಯನ ಗೌರವವನ್ನು ಆತನ ಬ್ಯಾಂಕಿನಲ್ಲಿಯ ಹಣ, ಅವನು ವಾಸಿಸುವ ಮನೆ, ಅವನು ಓಡಾಡುವ ವಾಹನ ಇವುಗಳ ಮೇಲೆ ನಿರ್ಣಯಿಸುವ ಪ್ರವೃತ್ತಿ ಕಂಡುಬರುತ್ತಿದೆ. ಇದು ಒಳ್ಳೆಯ ಲಕ್ಷಣವಲ್ಲ. ದಯೆ, ಪರೋಪಕಾರ, ಕರುಣೆ ಈ ಸದ್ಗುಣಗಳು ನಾವು ವಾಸಿಸುವ ಭೂಮಿಯನ್ನೇ ಸ್ವರ್ಗವನ್ನಾಗಿ ಮಾರ್ಪಡಿಸಬಲ್ಲವು. ಈ ಗುಣಗಳನ್ನು ಬೆಳೆಸಿಕೊಂಡಾಗ ಮನುಷ್ಯನ ಮನಸ್ಸಿಗೆ ನೆಮ್ಮದಿ, ಸುಖ, ಶಾಂತಿ, ಸಮಾಧಾನ ಉಂಟಾಗುತ್ತದೆ.

ಪ್ರಶ್ನೆಗಳು :

27. ಈಗ ಮನುಷ್ಯನ ಗೌರವವನ್ನು ಯಾವ ವಿಷಯಗಳಿಂದ ಅಳೆಯುತ್ತಾರೆ ?

28. ರವೀಂದ್ರನಾಥ ಠಾಕೂರರು ಮಾನವತೆ ಬಗ್ಗೆ ಏನು ಹೇಳಿದ್ದಾರೆ ?

29. ನಾವು ವಾಸಿಸುವ ಭೂಮಿಯನ್ನು ಸ್ವರ್ಗವನ್ನಾಗಿಸುವ ಶಕ್ತಿ ಯಾವ ಸದ್ಗುಣಗಳಿಗಿವೆ ?

30. ಮನುಷ್ಯನ ಮನಸ್ಸಿನಲ್ಲಿ ಯಾವುದರ ಹೋರಾಟ ನಿರಂತರವಾಗಿ ನಡೆಯುತ್ತಿದೆ ?

ವಿಭಾಗ – 'ಬಿ'

(ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : $12 \times 1 = 12$

31. 'ಸಲೀಮನು ಶಾಲೆಗೆ ಹೋದನು' — ವಾಕ್ಯವು ಈ ಕಾಲದಲ್ಲಿದೆ.

(ಎ) ವರ್ತಮಾನಕಾಲ (ಬಿ) ಭೂತಕಾಲ

(ಸಿ) ಭವಿಷ್ಯತ್‌ಕಾಲ (ಡಿ) ಸಕಾಲ

32. ಕ್ರಿಯಾಸಮಾಸಕ್ಕೆ ಈ ಪದವು ಉದಾಹರಣೆಯಾಗಿದೆ

(ಎ) ನೆಲಮುಗಿಲು (ಬಿ) ಸವಿಚೈತ್ರ

(ಸಿ) ಮೈಕೊಡವಿ (ಡಿ) ಅರಮನೆ

33. 'ಸಂತೆ ಹಾದಿಲ್ ಕಲ್ಲುಕಟ್ಟೆ' ಇಲ್ಲಿನ 'ಹಾದಿಲ್' ಪದದ ಗ್ರಾಂಥಿಕ ರೂಪ

(ಎ) ಹಾದಿಗೆ (ಬಿ) ಹಾದಿಯು

(ಸಿ) ಹಾದಿಯಿಂದ (ಡಿ) ಹಾದಿಯಲ್ಲಿ

34. 'ಮಗುವಿನ ಮುಖವು ಚಂದ್ರನಂತೆ ಮನೋಹರವಾಗಿದೆ' — ಈ ವಾಕ್ಯದಲ್ಲಿರುವ ಅಲಂಕಾರ

(ಎ) ಉಪಮಾಲಂಕಾರ (ಬಿ) ರೂಪಕಾಲಂಕಾರ

(ಸಿ) ದೃಷ್ಟಾಂತಾಲಂಕಾರ (ಡಿ) ಉತ್ಪ್ರೇಕ್ಷಾಲಂಕಾರ

35. 'ಪಂಚಾಕ್ಷರಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

(ಎ) ಸವರ್ಣದೀರ್ಘ ಸಂಧಿ (ಬಿ) ಗುಣ ಸಂಧಿ

(ಸಿ) ವೃದ್ಧಿ ಸಂಧಿ (ಡಿ) ಯಣ್ ಸಂಧಿ

36. ಇವುಗಳಲ್ಲಿ 'ಸಾಮಾನ್ಯ ಅವ್ಯಯ'ಕ್ಕೆ ಉದಾಹರಣೆ

(ಎ) ಪಟಪಟ (ಬಿ) ಚೆನ್ನಾಗಿ

(ಸಿ) ಆದ್ದರಿಂದ (ಡಿ) ಅಬ್ಬಾ!

37. 'ಮೊತ್ತಮೊದಲು' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ

(ಎ) ಜೋಡುನುಡಿ (ಬಿ) ಅನುಕರಣಾವ್ಯಯ

(ಸಿ) ದ್ವಿರುಕ್ತಿ (ಡಿ) ತದ್ಧಿತಾಂತ

38. 'ಗಳಿಗೆ' ಪದದ ತತ್ಸಮ ರೂಪ

(ಎ) ಗಡಿಗೆ (ಬಿ) ಗರಿಕೆ

(ಸಿ) ಘಟಾ (ಡಿ) ಘಟಿಕಾ

39. 'ಗಿಡ, ಮರ, ಬೆಟ್ಟ' — ಇವು ಈ ನಾಮವಾಚಕಗಳಿಗೆ ಉದಾಹರಣೆ

(ಎ) ರೂಢನಾಮ (ಬಿ) ಅಂಕಿತನಾಮ

(ಸಿ) ಅನ್ವರ್ಥನಾಮ (ಡಿ) ಭಾವನಾಮ

40. ಇವುಗಳಲ್ಲಿ ಐದು ಮಾತ್ರೆಗಳಿಂದ ಕೂಡಿದ ಪದ

(ಎ) ಮಣ್ಣು (ಬಿ) ಕಾವೇರಿ

(ಸಿ) ಕನ್ನಡ (ಡಿ) ನಯನ

41. 'ರುಚಿಯನ್ನು' ಪದದಲ್ಲಿರುವ ವಿಭಕ್ತಿ

(ಎ) ಪ್ರಥಮಾ (ಬಿ) ದ್ವಿತೀಯಾ

(ಸಿ) ತೃತೀಯಾ (ಡಿ) ಪಂಚಮೀ

42. 'ತಕರಾರು' ಪದದ ಸಮಾನಾರ್ಥಕ ಪದ

(ಎ) ತರಾವರಿ (ಬಿ) ಕ್ಷಮಾಪಣೆ

(ಸಿ) ತರಾತುರಿ (ಡಿ) ಆಕ್ಷೇಪಣೆ

ವಿಭಾಗ – 'ಸಿ'

(ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

43. **ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** $1 \times 3 = 3$

* ಮನಸ್ಸಿದ್ದರೆ ಮಾರ್ಗ

* ಹಾಸಿಗೆ ಇದ್ದಷ್ಟು ಕಾಲು ಚಾಚು

* ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ

44. ನಿಮ್ಮನ್ನು ನಂಜನಗೂಡಿನ ಸರ್ಕಾರಿ ಪ್ರೌಢಶಾಲೆಯ 'ಅಭಿನವ್' ಎಂದು ಭಾವಿಸಿಕೊಂಡು, ನಿಮ್ಮ ಶಾಲಾ ಶೈಕ್ಷಣಿಕ ಚಟುವಟಿಕೆಗಳನ್ನು ಕುರಿತು ಮೈಸೂರು ಜಿಲ್ಲೆಯ ಬೆಟ್ಟದ ತುಂಗಾ ಶಾಲೆಯಲ್ಲಿರುವ ಗೆಳೆಯ 'ಪ್ರಣವ್'ಗೆ ಒಂದು ಪತ್ರ ಬರೆಯಿರಿ. $1 \times 4 = 4$

ಅಥವಾ

ನಿಮ್ಮನ್ನು ಮೈಸೂರಿನ ಅಶೋಕ ರಸ್ತೆಯಲ್ಲಿರುವ ಸರ್ಕಾರಿ ಪ್ರೌಢಶಾಲೆಯ 'ಅಪೂರ್ವ' ಎಂದು ಭಾವಿಸಿಕೊಂಡು, ನಿಮ್ಮ 'ವ್ಯಾಸಂಗ ದೃಢೀಕರಣ ಪತ್ರ'ವನ್ನು ನೀಡುವಂತೆ ಕೋರಿ ಶಾಲೆಯ ಮುಖ್ಯಶಿಕ್ಷಕರಿಗೊಂದು ಮನವಿ ಪತ್ರ ಬರೆಯಿರಿ.

45. **ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ :** $1 \times 4 = 4$

- ಜಲಸಂರಕ್ಷಣೆ
- ಬಾಲ್ಯವಿವಾಹ ಒಂದು ಸಾಮಾಜಿಕ ಪಿಡುಗು
- ದೂರದರ್ಶನದಿಂದಾಗುವ ಪ್ರಯೋಜನಗಳು